೪. ಮಾರುಕಟ್ಟೆಯಾಗಬಲ್ಲ ಅಧಿಕ ಹಾಲನ್ನು ಹಾಲಿನ ಉತ್ಪನ್ನಗಳಾದ ಕ್ರೀಂ, ತುಪ್ಪ, ಕೋವ ಮೈರೆಗಳಿಗಾಗಿ ಪರಿವರ್ತನೆ ಮಾಡಲು ಸಾಧ್ಯವಾದ ಸ್ಥಳಗಳಿಗೆ ಆದ್ಯತೆಯನ್ನು ನೀಡಬೇಕಂ.

೫. ಎಲ್ಲಾ ಋತುಮಾನಗಳ ರಸ್ತೆಯಿಂದ ಡೈರಿ ಸಹಕಾರ ಸಂಘಗಳು ೮ ಕಿಲೋಮೀಟರ್ ವ್ಯಾಪ್ತಿಯೊಳಗೆ ಇರುವುದು ಸಾಮಾನ್ಯ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಕೊನೆಯ ಪ್ರಶ್ನೆ ಒಂದು ಲೀಟರ್ ಹಾಲಿಗೆ ಯಾವಾಗಿನಿಂದ ಬೆಲೆ ಹೆಚ್ಚು ಮಾಡುತ್ತೀರಿ ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ.—ಈ ಪ್ರಶ್ನೆ ನಮ್ಮ ಮುಂದಿಲ್ಲ. ಸದ್ಯದಲ್ಲಿ ಹಾಲಿನ ದರ ಏರಿಸುವುದಿಲ್ಲ.

ಅಧ್ಯಕ್ಷರು.—ಶ್ರೀ ಆರ್. ಎನ್. ನಾಯಕರವರೆ, ತಮ್ಮ ಪ್ರಶ್ನೆ ೧೦ನೇ ತಾರೀಖಿನ ಮುಂಗಳವಾರಕ್ಕೆ ಹೋಗಿದೆ.

ಅರಣ್ಯ ಪ್ರದೇಶದಲ್ಲಿ ವಾಸಿಸುತ್ತಿರುವ ಹರಿಜನ ಗಿರಿಜನರು

೫೯. ಶ್ರೀಮತಿ ಸುಭದ್ರಾ ವಸಂತ (ವಿರಾಜಪೇಟೆ).— ಮಾನ್ಯ ಅರಣ್ಯ, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಕೊಡಗು ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ವಾಸಿಸುತ್ತಿರುವ ಹರಿಜನ ಗಿರಿಜನ ಕುಟುಂಬದವರ ಸಂಖ್ಯೆ ಎಷ್ಟು ಮತ್ತು ಎಷ್ಟು ವರ್ಷಗಳಿಂದ ವಾಸಿಸುತ್ತಿದ್ದಾರೆ ?

(ಆ) ಅವರ ಆರ್ಥಿಕ ಸುಧಾರಣೆ ಹಾಗೂ ಇತರ ಸೌಲಭ್ಯಗಳಿಗೆ ಏನಾದರೂ ಯೋಜನೆಗಳಿವೆಯೆ?

ಶ್ರೀ ಜೆ. ಎಸ್. ದೇಶ್‌ಮುಖ್ (ಅರಣ್ಯ, ಗಣಿ, ಹಾಗೂ ಭೂ ವಿಜ್ಞಾನ ಮಂತ್ರಿಗಳು).—

(ಅ) ಹರಿಜನ ಸಂಖ್ಯೆ ೧೫೫ ಗಿರಿಜನ ಸಂಖ್ಯೆ ೧೩೦೬
ಇವರು ಅನಾದಿಕಾಲದಿಂದ ವಾಸಿಸುತ್ತಿದ್ದಾರೆ. ನಿರ್ದಿಷ್ಟವಾಗಿ ಯಾವ ವರ್ಷದಿಂದ ವಾಸಿಸುತ್ತಿದ್ದಾರೆ ಎಂದು ಇನ್ನೂ ತಿಳಿದು ಬಂದಿಲ್ಲ.

(ಆ) ಇದೆ. ಅರಣ್ಯ ಇಲಾಖೆಗೆ ಸಂಬಂಧಪಟ್ಟ ವಿವರವನ್ನು ಕೆಳಗಡೆ ನಮೂದಿಸಿದೆ.

ಗಿರಿಜನರ ಉಪಯೋಗಕ್ಕಾಗಿ

ಹುಣಸೂರು ವಿಭಾಗ (ಕೊಡಗು ಜಿಲ್ಲೆಯಲ್ಲಿ ಬರುವ ಭಾಗ)

೧.	ಮನೆಗಳನ್ನು ಕಟ್ಟುವುದು	... ೨೫ ಮನೆಗಳು
೨.	ಲಾಗಿಂಗ್ ಕೆಲಸದಲ್ಲಿ ತರಬೇತಿ ಕೊಡುವುದು	... ೧೦ ಸ್ಥಳ/೧೦ ಫಲಾನುಭವಿಗಳಿ
೩.	ಸಾಮಾಜಿಕ ಭದ್ರತಾ ನೆಡುತೋಪು ಬೆಳಿಸುವುದು	... ೭ ಹೆಕ್ಟೇರ್
೪.	ಬಾವಿ ತೋಡುವುದು	... ೧ ಬಾವಿ

ಗಿರಿಜನರಿಗಾಗಿ ಅರಣ್ಯ ಇಲಾಖೆಯಿಂದ ಈ ಕೆಳಗಿನ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗುತ್ತಿದೆ

೧.	ಮನೆಗಳಿಗೆ ಚುಲ್ಲಾ ಸರಬರಾಜು ಮಾಡುವುದು	... ೧೦ ಚುಲ್ಲಾಗಳು
೨.	ಸಾಮಾಜಿಕ ಭದ್ರತಾ ನೆಡುತೋಪು ಬೆಳೆಸುವುದು	... ೭ ಹೆಕ್ಟೇರ್

ಗಿರಿಜನರ ಆರ್ಥಿಕ ಸುಧಾರಣೆಗಾಗಿ ೧೯೮೬–೮೭ನೇ ಸಾಲಿನಲ್ಲಿ ಈ ಕೆಳಗಿನಂತಿವೆ.

೧.	ಉಚಿತ ವಸತಿಗಳನ್ನು ಕಟ್ಟುವುದು	... ೩೫ ಫಲಾನುಭವಿಗಳು
೨.	ಬಂಜರು ಭೂಮಿ ವಿತರಣೆ	... ೨೫ ಫಲಾನುಭವಿಗಳು

೩.	ಸಾಮಾಜಿಕ ಭದ್ರತಾ ನೆಡುತೋಪು ಬೆಳೆಸಿಕೊಡುವುದು	... ೩೯ ಫಲಾನುಭವಿಗಳು
೪.	ನಾಟಾ ತಯಾರಿಕೆಯಲ್ಲಿ ತರಬೇತಿ ಕೊಡುವುದು	... ೧೦ ಫಲಾನುಭವಿಗಳು
೫.	ಕಮ್ಯುನಿಟಿ ಹಾಲ್ ಕಟ್ಟುವುದು	... ೧ ಫಲಾನುಭವಿಗಳು
೬.	ಬಾವಿ ತೋಡುವುದು	... ೧ ಫಲಾನುಭವಿಗಳು

ಹರಿಜನ ಆರ್ಥಿಕ ಸಂಧಾರಣೆಗಾಗಿ ಇರುವ ಯೋಜನೆ ಈ ಕೆಳಗಿನಂತಿವೆ.

೧.	ಸಾಮಾಜಿಕ ಭದ್ರತಾ ನೆಡಂತೋಪು	... ೨೫ ಹೆಕ್ಟೇರು, ೫೦ ಫಲಾನುಭವಿಗಳು
೨.	ಆಸ್ತ್ರಒಲೆ ವಿತರಣೆ	... ೩೦ ಫಲಾನುಭವಿಗಳು

ಶ್ರೀಮತಿ ಸುಮಾ ವಸಂತ್.—ಮಾನ್ಯ ಅಧ್ಯಕ್ಷರೆ, ಹರಿಜನ-ಗಿರಿಜನರಿಗಾಗಿ ಕೆಲವು ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗಿದೆ. ಇದನ್ನು ಕೊಡಗು ಜಿಲ್ಲೆಯಲ್ಲಿ ಎಷ್ಟು ಹರಿಜನರಿಗೆ ಜಾರಿಗೊಳಿಸಿದೆ?

ಶ್ರೀ ಜೆ. ಎಸ್. ದೇಶವಂಖ್.—ಮಾನ್ಯ ಅಧ್ಯಕ್ಷರೆ, ಹರಿಜನರಿಗೆ ಈಗಾಗಲೇ ಅಂದರೆ ೧೯೬೬-೬೭ರಲ್ಲಿ ೨೨ ಮನೆಗಳನ್ನು ಕಟ್ಟಲಾಗಿದೆ. ಮಾನ್ಯ ಸದಸ್ಯರಿಗೆ ವಿವರ ಬೇಕು ಅಂದರೆ ಅವುಗಳು ನನ್ನ ಬಳಿ ಇದೆ. ಅದನ್ನು ಮಾನು ಕೊಡುತ್ತೇನೆ.

ಶ್ರೀಮತಿ ಸುಮಾ ವಸಂತ.—ಮಾನ್ಯ ಅಧ್ಯಕ್ಷರೆ, ಹರಿಜನ-ಗಿರಿಜನರು ಆನಾದಿ ಕಾಲದಿಂದಲೂ ವಾಸಿಸುತ್ತಿದ್ದಾರೆ, ಎಷ್ಟು ವರ್ಷಗಳಿಂದ ವಾಸಿಸುತ್ತಿದ್ದಾರೋ ಗೊತ್ತಿಲ್ಲ ಎಂದು ಉತ್ತರದಲ್ಲಿ ಹೇಳಿದ್ದಾರೆ. ಎರಡು ವರ್ಷಗಳಿಂದ ಹರಿಜನ-ಗಿರಿಜನರಿಗೆ ಆರಣ್ಯ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ತುಂಬ ಕಿರುಕುಳ ಕೊಡುತ್ತಾ ಇದ್ದಾರೆ. ನಿನ್ನೆ ಕೂಡ ನನಗೆ ಟೆಲಿಗ್ರಾಂ ಬಂದಿದೆ. ಆ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಜೆ. ಎಸ್. ದೇಶವಂಖ್.—ಸೂಕ್ತ ಪರಿಶೀಲನೆ ಮಾಡಿ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ.

ಕೂಡ್ಲಿಗಿ ತಾಲ್ಲೂಕಿನಲ್ಲಿ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಪೂರೈಕೆ

೬೮೫ (ಡಿ) ಶ್ರೀ ಕೆ. ವಿ. ರವೀಂದ್ರನಾಥ್ ಬಾಬು (ಕೊಟ್ಟೂರು).—ಮಾನ್ಯ ವಾಣಿಜ್ಯ ಕೈಗಾರಿಕಾ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನಲ್ಲಿ ಬಹಳಷ್ಟು ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಅವುಗಳ ಸಂಖ್ಯೆ ಎಷ್ಟು ?

ಇ) ವಿದ್ಯುಚ್ಛಕ್ತಿ ಒದಗಿಸುವಲ್ಲಿನ ವಿಳಂಬಕ್ಕೆ ಕಾರಣಗಳೇನು ?

ಈ) ಬ್ಯಾಂಕಿನವರು ಸಾಲಗಾರರು ಬಡ್ಡಿ ಪಾವತಿ ಮಾಡದಿದ್ದುದರಿಂದ ಪಂಪುಸೆಟ್ಟುಗಳನ್ನು ವಾಪಸ್ಸು ಪಡೆಯಲು ನಿರ್ಧರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಉ) ಹಾಗಿದ್ದಲ್ಲಿ ಸರ್ಕಾರವು ಈ ದಿಸೆಯಲ್ಲಿ ಕೈಗೊಂಡ ಕ್ರಮಗಳೇನು ?

ಶ್ರೀ ಜೆ.ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) ಬಂದಿದೆ.

ಆ) ೩೧-೧-೬೭ ರಲ್ಲಿದಂತೆ ೧೭೬.

ಇ) ಕಾರ್ಯಕ್ರಮದಂತೆ ಕೆಲಸ ಮಾಡಲಾಗುತ್ತಿದೆ.

ಈ) ಸರ್ಕಾರದ ಗಮನಕ್ಕೆ ಬಂದಿಲ್ಲ.

ಉ) (ಈ) ಪ್ರಶ್ನೆಯು ಉತ್ತರದಿಂದ ಇದು ಉದ್ಭವಿಸುವುದಿಲ್ಲ